ಸ್ ೧೯೦೨—1903ನೇ ಇಸವಿ ವಿ|| ಅರ್ಜಿ ನಂಬರ್ 218.

ಶಿವಮೊಗ್ಗದಲ್ಲಿದ್ದ ವೃತಪಟ್ಟ ಲೇಟ್ ಸಬ್ ಓವರಶೀರ್ ವೈಲಾರೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಎಸ್. ಕಾಳಿಂಗಪ್ಪ ಬಿ ವೈಲಾರೈಯ್ಯ, ಶಿವಮೊಗ್ಗವಾಸಿ, ವೃತಪಟ್ಟ ಸದರೀ ವೈಲಾರೈಯ್ಯನವರಿಗೆ ಖಾನಾವುಗ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳಿದ ಎಸ್. ಕಾಳಿಂಗಪ್ಪನವರು ಶಿವಮೊಗ್ಗ ವಾಸಸ್ಥರಾಗಿ ವೃತಪಟ್ಟ ವೈಲಾರೈಯ್ಯನವರ ಜಿಂದ್ಗಿ ಬಗ್ಯಾಗಿ ಬರತಕ್ಕ 1,930—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ನಂಬರ್ ರೆಗ್ಯುಲೇಷ್ನ್ ವೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಎಸ್. ಕಾಳಿಂಗಪ್ಪನವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಆಗಸ್ಟು ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ನಿರ್ಣಯ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ವೈಲಾರೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಜುಲೈ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಶೇಷಯ್ಯಂಗಾರ್,
ಶಿರಸ್ತೇದಾರ್.

ಬೆಂಗಳೂರು ಸಬ್ ಜಡ್ಜ್ ರವರ ಕೋರ್ಟ್‌ನಲ್ಲಿ.

ಸ್ ೧೯೦೩—1904ನೇ ಇಸವಿ ವಿ|| ನಂಬರ್ 34.

ಅರ್ಜೀದಾರು ಬೆಂಗಳೂರು ತಾಲ್ಲೂಕು ವರ್ತೂರು ಹೋಬಳಿ ದೊಡ್ಡನೆಕ್ಕುಂದಿ ಗ್ರಾಮದಲ್ಲಿ ಇರುವ ಮುನ್ನಾಕೋಳಾಳದ ವೆಂಕಟೇಗೌಡನ ಮಗ ಅಂಜೈಯ್ಯ, ವೈನರಾದ ನೆಕ್ಕುಂದಿ ಗ್ರಾಮದಲ್ಲಿ ಇರುವ ಮುನೆಪ್ಪನ ಮುಕ್ಕಳು 1ನೇ ಮುನಿವೆಂಕಟಪ್ಪನ ಆಸ್ತೀ ವಿಷಯದಲ್ಲಿ—

ಸದರೀ ವೈನರಾದ 1ನೇ ಮುನಿವೆಂಕಟಪ್ಪನಿಗೆ ಚಿಕ್ಕತಂದೆ ಆಗಬೇಕೆಂಬ ಹಕ್ಕಿನಮೇಲೆ ವೆಂಕಟೇಗೌಡನ ಮಗ ಅಂಜೈಯ್ಯನು ಸದರೀ ವೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ ೧೯೦೩ನೇ ಇಸವಿ ಆಗಸ್ಟ್ ತಾರೀಖು 14ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ್ ೧೯೦೩ನೇ ಇಸವಿ ಜುಲೈ ತಿಂಗಳು 25ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಪಿ. ತಿಂಗ್ಯಾಚಾರ್,
ಸಬ್ ಜಡ್ಜ್.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋ ಟಿ ಸ್ .

ತಾರೀಖು 21ನೇ ಜುಲೈ 1903.

ಬೆಂಗಳೂರು ಸಿಟಿ 4 ವ 5, 6 ಮತ್ತು 7ನೇ ಡಿವೀರ್ಜಗಳಿಗೆ ಇದುವರಿವಿಗೂ ಇದ್ದ ರಿಜಿಸ್ಟ್ರಾರ್‌ಗಳನ್ನು ವಜಾ ಮಾಡಿದ್ದರಿಂದ 4 ವ 5ನೇ ಡಿವೀರ್ಜಗಳ ನಿವಾಸಿಗಳು ಜನನ ಮರಣ ಇತ್ಯಾದಿಗಳನ್ನು 2ನೇ ಡಿವೀರ್ಜ ಚಿಕ್ಕಪ್ಯಾಟೆಯಲ್ಲಿ ಇರುವ ತಾಲ್ಲೂಕು ಕಛೇರಿ ಕಟ್ಟಡದಲ್ಲಿ ಇರತಕ್ಕ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಪೋರ್ಟು ಮಾಡಬೇಕೆಂತಲೂ, ಮತ್ತು 6 ವ 7ನೇ ಡಿವೀರ್ಜಗಳ ನಿವಾಸಿಗಳು 3ನೇ ಡಿವೀರ್ಜ ಅರಳೆಪ್ಯಾಟೆ ಆಸ್ಪತ್ರೆಯಲ್ಲಿ ಇರುವ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಪೋರ್ಟು ಮಾಡಬೇಕೆಂತಲೂ ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸಿ ಇರುತ್ತೆ.

ಪಿ. ಪಲ್ಪ್, ಫ್ಲೂರ್ ಪ್ರೆಸಿಡೆಂಟ್.

ನೋಟಿಸ್.

ತಾರೀಖು 29ನೇ ಜುಲೈ 1903.

ಮೈಸೂರು ಕಿಲ್ಲೆಯಲ್ಲಿರುವ ನೇತ್ರವೈದ್ಯ ನಾರಣಪಂಡಿತರ ಹಿರೀಮಗ ನೇತ್ರವೈದ್ಯ ನಂಜುಂಡಪಂಡಿತನಾದ ನಾನು ಇದರಿಂದ ಸರ್ವರಿಗೂ ತಿಳಿಸುವುದೇನಂದರೆ:—

ಸೀತಾವಿಳಾಸ ಸನ್ನಿಧಾನದಿಂದ ನಮ್ಮ ತಂದೆಗಳ ಹೆಸರಿಗೆ ಬಂದು ವೃತ್ತಿಯು ಬಂದಿರುತ್ತೆ. ಈ ವೃತ್ತಿಗೆ ಸೇರಿದ ಸೀತಾವಿಳಾಸ ಅಗ್ರಹಾರದಲ್ಲಿನ ಬಂದು ಮನೆಯೂ, ಮತ್ತು ಇದಕ್ಕೆ ಸೇರಿದ ಎಡತೊರೆ ತಾಲ್ಲೂಕು ಗಂಧನಹಳ್ಳಿ ನಾಲಾ ಕೆಳಗೆ ಇರುವ (5) ಐದು ಎಕರೆ ಜಮೀನನ್ನು ಸಹಾ ಸದರಿ ನಾರಣಪಂಡಿತರು ಕ್ರಯ ವಗೈರೆ ಮಾಡುವುದಕ್ಕೆ ಉದ್ಯುಕ್ತರಾಗಿರುವದಾಗಿ ವರ್ತಮಾನ ಕೇಳುತ್ತೇನೆ. ಪಿತೋ ವೃತ್ತಿಯಲ್ಲಿ ಜ್ಯೇಷ್ಠಪುತ್ರನಾದ ನಾನು ಅರ್ಧ ಹಿಸ್ಸೆಗೆ ಬಾಧ್ಯನಾಗಿರುತ್ತೇನೆ. ಆದ್ದರಿಂದ ಯಾರೂ ಕ್ರಯ ವಗೈರೆ ಮಾಡಿಕೊಳ್ಳಕೂಡದೆಂಬುದಾಗಿ ತಿಳಿಯಪಡಿಸಿರುತ್ತೇನೆ.

ನೇತ್ರವೈದ್ಯ ನಂಜುಂಡಪಂಡಿತನ ರುಜು.

Mysore Government Central Press, Bangalore—1903.